# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 191 |
| ಸದಸ್ಯರ ಹೆಸರು | ಶ್ರೀ ಕೆ.ಅಬ್ದುಲ್ ಜಬ್ಬರ್ |
| ಉತ್ತರಿಸುವ ದಿನಾಂಕ | 05.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ)<br><br>ಆ) | ರಾಜ್ಯದಲ್ಲಿ ಮುಜರಾಯಿ ಆಸ್ತಿಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ – ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಆಸ್ತಿಗಳು ಒತ್ತುವರಿಯಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)<br><br>ಈ ಒತ್ತುವರಿಯಾಗಿರುವ ಆಸ್ತಿಗಳನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು) | ಹೌದು. ರಾಜ್ಯದಲ್ಲಿ ಮುಜರಾಯಿ ಆಸ್ತಿಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಒತ್ತುವರಿಗಳನ್ನು ಗುರುತಿಸುವ ಸಲುವಾಗಿ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 2022ನೇ ಸಾಲಿನ ವರೆಗೆ ದೇವಾಲಯದ ಹೆಸರಿನಲ್ಲಿ ಇಂಡೀಕರಣವಾಗಿದ್ದ ಆಸ್ತಿಗಳು 3,915 ಎಕರೆಗಳಾಗಿರುತ್ತದೆ.<br><br>2023 ಮತ್ತು 2024ನೇ ಸಾಲಿನ ಅಂತ್ಯದ ವರೆಗೆ 11,498 ಎಕರೆ ಆಸ್ತಿಗಳನ್ನು ದೇವಾಲಯದ ಹೆಸರಿಗೆ ಪಹಣಿಯಲ್ಲಿ ಇಂಡೀಕರಿಸಲಾಗಿದ್ದು, ಒಟ್ಟಾರೆ ಸುಮಾರು **15,413 ಎಕರೆ** ಆಸ್ತಿಗಳನ್ನು ದೇವಾಲಯಗಳ ಹೆಸರಿಗೆ ಪಹಣಿಯಲ್ಲಿ ಇಂಡೀಕರಣ ಮಾಡಲಾಗಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ.<br><br>ದಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಸ್ಥಿರ ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಮತ್ತು ಸ್ವತ್ತಿನಿಂದ ಅನಧಿಕೃತದಾರರನ್ನು ತೆರವುಗೊಳಿಸಿ ದೇವಾಲಯಗಳ ಆಸ್ತಿಯನ್ನು ಹಿಂಪಡೆಯುವ ಉದ್ದೇಶದಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br><br>• ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿಯ ಮೂಲಕ ಆನ್‌ಲೈನ್ ತಂತ್ರಾಂಶ (INTEGRATED TEMPLE MANAGEMENT SYSTEM/ITMS) ವನ್ನು ಜಾರಿಗೆ ತರಲಾಗಿದೆ. ಸದರಿ ತಂತ್ರಾಂಶದಲ್ಲಿ ಹಂತ ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ.<br><br>• ಅಧಿಸೂಚಿತ ದೇವಸ್ಥಾನಗಳ ಜಾಗಗಳಲ್ಲಿನ ಒತ್ತುವರಿದಾರರು/ ಅನಧಿಕೃತದಾರರನ್ನು ತೆರವು ಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ಹಾಗೂ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ದಾಖಲಾಗಿರುವ ಪ್ರಕರಣಗಳಿಗೆ ಕಂಡಿಕೆವಾರು ಆಕ್ಷೇಪಣೆಗಳನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | • ಸರ್ಕಾರದ ಆದೇಶ ಸಂಖ್ಯೆ ಕಂಇ 49 ಮುಆಬಿ 2021, ದಿನಾಂಕ:05-09-2022ರ ಆದೇಶದಲ್ಲಿ ಮುಜರಾಯಿ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ "ಎ" ಮತ್ತು "ಬಿ" ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ ನಗರ ಸಭೆ/ ಪುರಸಭೆ/ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ "ಸಿ" ಶ್ರೇಣಿಯ ಮುಜರಾಯಿ ಆಸ್ತಿಗಳ ಬಾಬ್ತು, ಹಕ್ಕು ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಿ ಮುಜರಾಯಿ ಇಲಾಖೆಯ ನಂತರ ಗ್ರೂಪ್ 'ಸಿ' ಶ್ರೇಣಿಯ ದೇವಾಲಯಗಳ ಹಕ್ಕು ದಾಖಲೆಗಳ ಇಂಡೀಕರಣ ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ ಕಾರ್ಯರೂಪಕ್ಕೆ ತರಲು ಕಟ್ಟು ನಿಟ್ಟಿನ ಸೂಚನೆಯನ್ನು ನೀಡಿದೆ.<br><br>• ಅದರಂತೆ ಮುಜರಾಯಿ ಇಲಾಖೆಯ ಸ್ಥಿರಾಸ್ತಿಗಳ ಸಂರಕ್ಷಣಾ ಕಾರ್ಯಗಳಾದ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ಈ ಕೆಳಕಂಡ ರಾಜ್ಯ ಮಟ್ಟದ/ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಸರ್ಕಾರದಿಂದ ಆದೇಶಿಸಲಾಗಿದೆ.<br><br>ರಾಜ್ಯ ಮಟ್ಟದ ಸಮಿತಿ:-<br><br>1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು — ಅಧ್ಯಕ್ಷರು<br>2. ಆಯುಕ್ತರು, ಭೂ ಮಾಪನ ಇಲಾಖೆ — ಸದಸ್ಯರು<br>3. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ — ಸದಸ್ಯರು<br>4. ಜಂಟಿ ನಿರ್ದೇಶಕರು, ಭೂ ಮಾಪನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು — ಸದಸ್ಯ ಕಾರ್ಯದರ್ಶಿ |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

ಜಿಲ್ಲಾ ಮಟ್ಟದ ಸಮಿತಿ:-

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಅಪರ ಜಿಲ್ಲಾಧಿಕಾರಿ | ಸದಸ್ಯರು |
| 3 | ಉಪ ವಿಭಾಗಾಧಿಕಾರಿ | ಸದಸ್ಯರು |
| 4 | ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಸ್ಥಳೀಯ ಸಂಸ್ಥೆ ಕೋಶ (ಸ್ಥಳೀಯ ಸಂಸ್ಥೆ) | ಸದಸ್ಯರು |
| 5 | ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

ಈ ಸಂಬಂಧವಾಗಿ ಜಿಲ್ಲಾಧಿಕಾರಿಯವರ ಹಂತದಲ್ಲಿ ಸಭೆಯನ್ನು ಜರುಗಿಸಿ ಜಿಲ್ಲಾಮಟ್ಟದಲ್ಲಿ ಕ್ರಮವಹಿಸಿರುತ್ತಾರೆ.

ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣ ಸಂಖ್ಯೆ: WP27/2018 (LB-RES) ದಿನಾಂಕ:14-09-2023ರ ಆದೇಶದನ್ವಯ ದೇವಾಲಯದ ಹೆಸರಿಗೆ ಖಾತೆ ದಾಖಲು ಮಾಡಿ ದೇವಾಲಯದ ಹೆಸರು-ಧಾರ್ಮಿಕ ದತ್ತಿ ಇಲಾಖೆ ಎಂದು ಪಹಣಿಯಲ್ಲಿ ನಮೂದಿಸುವ ಬಗ್ಗೆ ಕ್ರಮವಹಿಸಿ ಪಾಲನಾ ವರದಿಯನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.</td></tr>
<tr><td>ಇ)</td><td>ಮುಂದಿನ ದಿನಗಳಲ್ಲಿ ಅತಿಕ್ರಮಣವಾಗಿ ಒತ್ತುವರಿಯಾಗಿರುವ ಮುಜರಾಯಿ ಆಸ್ತಿಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡ ಮುನ್ನೆಚ್ಚರಿಕೆ ಕ್ರಮ ಗಳಾವುವು?</td><td>ಧಾರ್ಮಿಕ ಸಂಸ್ಥೆಗಳ ಜಮೀನುಗಳ ಪ್ರಕರಣಗಳನ್ನು ಮೇಲುಸ್ತುವಾರಿ ಮಾಡಲು ಆಯುಕ್ತಾಲಯದ ಹಂತದಲ್ಲಿ ಹಿರಿಯ ಅಧಿಕಾರಿಯನ್ನು ಎಸ್ಟೇಟ್ ಆಫೀಸರ್‌ನ್ನಾಗಿ ನೇಮಿಸುವಂತೆ ಸರ್ಕಾರದ ಪತ್ರ ಸಂಖ್ಯೆ ಕಂಇ 49 ಮುಆಬಿ 2021 ದಿನಾಂಕ:21-09-2024ರಲ್ಲಿ ನಿರ್ದೇಶಿಸಲಾಗಿದೆ. ಅದರಂತೆ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯ ಕೇಂದ್ರಸ್ಥಾನಿಕ ಸಹಾಯಕರು-2 ರವರನ್ನು ಎಸ್ಟೇಟ್ ಆಫೀಸರ್‌ನ್ನಾಗಿ ನೇಮಿಸಲಾಗಿದೆ.<br><br>ಮುಜರಾಯಿ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನುಗಳನ್ನು ಸಂರಕ್ಷಿಸುವ ಸಲುವಾಗಿ ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಹಸಿರು ಬೇಲಿ ನಿರ್ಮಿಸುವಂತೆ ಹಾಗೂ ಅನಧಿಕೃತ ಒತ್ತುವರಿಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸೂಚನೆಯನ್ನು ನೀಡಲಾಗಿರುತ್ತದೆ.</td></tr>
</table>

ಸಂಖ್ಯೆ: ಕಂಇ 8 ಮುಸಪು 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ-

| ಮುಜರಾಯಿ ಇಲಾಖೆ ವ್ಯಾಪ್ತಿಯ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ಪಹಣಿಯಲ್ಲಿ ಇಂಡೀಕರಣ ಮಾಡಲಾದ ವಿವರ | | | |
|---|---|---|---|
| ಕ್ರ ಸಂ | ಜಿಲ್ಲೆ | ಒಟ್ಟು ವಿಸ್ತೀರ್ಣ | |
| | | ಎಕರೆ | ಗುಂಟೆ |
| 1 | ಬೆಳಗಾವಿ | **868** | **36** |
| 2 | ಬಾಗಲಕೋಟೆ | **8** | **37** |
| 3 | ವಿಜಯಪುರ | **0** | **0** |
| 4 | ಕಲಬುರಗಿ | **1172** | **13** |
| 5 | ಬೀದರ್ | **446** | **11** |
| 6 | ಕೊಪ್ಪಳ | **0** | **0** |
| 7 | ಗದಗ | **613** | **17** |
| 8 | ಧಾರವಾಡ | **7** | **22** |
| 9 | ಉತ್ತರ ಕನ್ನಡ | **372** | **22** |
| 10 | ಹಾವೇರಿ | **758** | **0** |
| 11 | ಬಳ್ಳಾರಿ | **50** | **38.8** |
| 12 | ಚಿತ್ರದುರ್ಗ | **86** | **24** |
| 13 | ದಾವಣಗೆರೆ | **18** | **11** |
| 14 | ಶಿವಮೊಗ್ಗ | **552** | **7.08** |
| 15 | ಉಡುಪಿ | **271** | **32** |
| 16 | ಚಿಕ್ಕಮಗಳೂರು | **1435** | **12** |
| 17 | ತುಮಕೂರು | **1123** | **30** |
| 18 | ಕೋಲಾರ | **616** | **16** |
| 19 | ಬೆಂಗಳೂರು | **30** | **0** |
| 20 | ಬೆಂಗಳೂರು ಗ್ರಾಮಾಂತರ | **522** | **24** |
| 21 | ಮಂಡ್ಯ | **1070** | **10** |
| 22 | ಹಾಸನ | **1633** | **31** |
| 23 | ದಕ್ಷಿಣ ಕನ್ನಡ | **58** | **26.6** |
| 24 | ಕೊಡಗು | **469** | **31.2** |
| 25 | ಮೈಸೂರು | **1164** | **17** |
| 26 | ಚಾಮರಾಜನಗರ | **436** | **25** |
| 27 | ಚಿಕ್ಕಬಳ್ಳಾಪುರ | **0** | **0** |
| 28 | ರಾಮನಗರ | **843** | **25** |
| 29 | ಯಾದಗಿರಿ | **387** | **8** |
| 30 | ರಾಯಚೂರು | **78** | **14** |
| 31 | ವಿಜಯನಗರ | **314** | **36.4** |
| **ಒಟ್ಟು** | | **15413** | **17.08** |